ಅತ್ತಿತ್ತ ಹರಿದಾಡಿದವು. ಮಾಮೂ ಅದು ತನಗೇನು ಸಂಬಂಧ ಪಟ್ಟದ್ದಲ್ಲವೆಂದು ಸುಮ್ಮನಿದ್ದ. ಅದಲ್ಲದೆ ಅವನಿಗೆ ಮೊದಲೆ ಇನ್ಸ್‌ಪೆಕ್ಟರ್ ಎಚ್ಚರಿಸಿರುವುದರಿಂದ ಅವರ ವಿಷಯಕ್ಕೆ ತಲೆ ಹಾಕ ಬಾರದೆಂದು ತನ್ನ ಪಾಡಿಗೆ ತಾನು ಉಳಿದ. ಆದರೂ ಅವನ ಗೋಲಾಕಾರದ ಕಣ್ಣುಗಳು ಅವರತ್ತ ಸುಳಿಯಿತು. ಪಾಂಬು ಅದನ್ನು ಗುರುತಿಸಿದವನೆ ಅಧಿಕಾರಿಗೆ ಪಿಸು ನುಡಿದ.

'ಸಾರ್, ಆ ವಿಷ್ಯ ಇಲ್ಲಿ ಬೇಡಾನ್ಸುತ್ತೆ. ಇಲ್ಲಿ ನಮ್ಮ ಮಾತನ್ನು ಕದ್ದು ಕೇಳುವವರಿದ್ದಾರೆ'

ಅಧಿಕಾರಿ ಅವನು ಹೇಳಿದ್ದಕ್ಕಾಗಿಯೇ ಯಾರಾದರೂ ತಮ್ಮನ್ನು ಗಮನಿಸುತ್ತಿರುವರೆ ಎಂದು ನೋಡಿದ. ಯಾರೂ ಗಮನಿಸುವಂತಿರಲಿಲ್ಲ.

'ಸರಿ, ಹಾಗಾದರೆ ಮುಂದಕ್ಕೆ ನಡೆ' ಅಧಿಕಾರಿ ಅವನ ಪ್ರತಿಕ್ರಿಯೆಗೂ ಕಾಯದೆ ತನ್ನ ಜೀಪ್ನತ್ತ ತೆರಳಿದ. ಪಾಂಬು ಅವನನ್ನು ಅನುಸರಿಸುವುದು ಅನಿವಾರ್ಯವಾಯಿತು.

ಇಬ್ಬರೂ ಜೀಪ್ ಬಳಿ ಬಂದು ನಿಂತರು.

'ಈಗ ಹೇಳು ಪಾಂಬು, ನೀನು ಬಂದಿರೋದು ನನ್ನ ಕೆಲಸಕ್ಕಾಗಿ ಅಂದೆ, ಅದೇನು?'

'ಸಾರ್, ನೀವು ಲಹರಿಯ ಕೇಸ್‌ಗೆ ಸಂಬಂಧಪಟ್ಟ ಸಾಕ್ಷಿಯನ್ನು ಹುಡುಕುತ್ತಿದ್ದೀರಲ್ಲವೆ? ಆತನನ್ನು ಹುಡುಕಿಕೊಂಡು ಇಲ್ಲಿಗೆ ಬಂದಿರುವೆ?'

'ಒಹೋ! ಹಾಗೋ. ಆ ವ್ಯಕ್ತಿ ಈ ಕಡೆ ಬಂದಿರುವನೆಂದು ನಿನಗೆ ಹೇಗೆ ತಿಳಿಯಿತು?' ಹರಿತವಾದ ಪ್ರಶ್ನೆ ಪಾಂಬುವನ್ನು ತಿವಿಯಿತು.

'ತಮ್ಮನ್ನು ಭೇಟಿಯಾಗಿ ಬಂದ ಮೇಲೆ ನಾನು ಆ ವ್ಯಕ್ತಿಯನ್ನು ಹುಡುಕಿಕೊಂಡು ಬಂದೆ. ಅವ್ನ ಬಗ್ಗೆ ಹೆಚ್ಚಾಗಿ ತಿಳಿದಿರೋನು ಮುತ್ತುಚಾಂಡಿ. ಅದಕ್ಕಾಗಿ ಅವನನ್ನು ಕೇಳೋಣಾಂತ ಇಲ್ಲಿಗೆ ಬಂದೆ'

'ಮುತ್ತುಚಾಂಡಿ! ಅಂದ್ರೆ, ನಿನ್ನ ಆಪ್ತ ಸ್ನೇಹಿತನೆ?'

'ಹೌದು ಸಾರ್, ಅವನನ್ನು ಹುಡುಕಿಕೊಂಡು ಬಂದೆ. ಆದ್ರೆ ಬಂದ ಕೆಲ್ಸ ಆಗ್ಲಿಲ್ಲ'

'ಅಂದ್ರೇನು?'

'ಅವ್ನು ಎಲ್ಲೋ ಹೋಗಿದ್ದಾನೆ. ನನ್ನ ಊಹೆಯೇನಂದ್ರೆ ಅವ್ನು ಇವತ್ತು ಬೆಳಗ್ಗೆ ಮೀನುಗಾರರ ಜೊತೆಗೆ ಮಾತಾಡೋದಿಕ್ಕೆ ಹೋಗಿದ್ದಾನೇನೋ. ನಾನು ಅವನನ್ನು ಅಲ್ಲಿ ಭೇಟಿ ಮಾಡಿರುತ್ತಿದ್ದರೆ ಸಿಗ್ತಿದ್ದ. ಇಲ್ಲಿ ಬಂದು ನನ್ನ ಸಮಯ ಹಾಳಾಯ್ತು'.

ಇನ್ಸ್‌ಪೆಕ್ಟರ್ ರಾಜಧಾನಿ ಪಾಂಬು ಎಂತಹ ವ್ಯಕ್ತಿಯೆನ್ನುವುದನ್ನು ತಿಳಿದುಕೊಂಡ. ಸರಿಯಾದ ಸಮಯಕ್ಕೆ ಅವನ ನಿಜವಾದ ಬಣ್ಣವನ್ನು ಬಯಲು ಮಾಡಬೇಕೆಂದು ನಿರ್ಧರಿಸಿದ.

'ನೀನು ಆ ದಿನ ನನ್ನತ್ರ ಹೇಳಿದ್ದೇನು, ಮುತ್ತುಚಾಂಡಿ ಸಿಟಿಯಲ್ಲಿ ಅಪಾರ್ಟ್‌ಮೆಂಟ್ ಮಾಡಿಕೊಂಡಿರುವನೆಂದಲ್ಲವೆ? ಈಗ... ಇಲ್ಲಿ ಇಂತ ಕೊಂಪೆಯಲ್ಲಿ ಮುತ್ತುಚಾಂಡಿ?' ಆಶ್ಚರ್ಯ ವ್ಯಕ್ತಪಡಿಸಿದ.

'ಹೂಂ... ಹಾಂ... ಅದು ಅದು ಅವ್ನು ಇಲ್ಲಿಗೆ ಆವಾಗಾವಾಗ ಬರ್ತಾ ಇರ್ತಾನೆ. ಇಲ್ಲಿ ಅವನದೊಂದು ಮನೆಯಿದೆ' ಸುಳ್ಳಿನ ಮಾಲೆಯನ್ನು ಹೆಣೆದ.

'ಸರಿ, ಅವ್ನು ಯಾವಾಗ ಇಲ್ಲಿಗೆ ಬರ್ತಾನೆ ಅನ್ನೋದು ನಿನಗೆ ಗೊತ್ತೆ?' ಪಾಂಬುವನ್ನು ಮಾತಿನಲ್ಲಿಯೇ ಸಿಲುಕಿಸುವಂತೆ ಕೇಳಿದ ಅಧಿಕಾರಿ.

'ಇಲ್ಲ... ಇಲ್ಲ... ಅದೇ ಈಗ ಎಡವಟ್ಟಾಗಿದ್ದು. ಅವ್ನು ಇಲ್ಲಿದ್ದಾನೇಂತ ನಾನು ಇಲ್ಲಿಗೆ ಬಂದೆ. ಅವ್ನು ಸಿಗಲಿಲ್ಲ' ಸುಳ್ಳು ಸರಾಗವಾಗಿ ಹೊರ ಹೊಮ್ಮಿತು.

'ಪಾಂಬು, ನೀನು ಯಾವಾಗಲೂ ಇಲ್ಲಿಗೆ ಬರ್ತಾ ಇರ್ತಿ ತಾನೆ?'

ರಾಜಧಾನಿ ಅವನ ಬಿಳಿಚಿಕೊಂಡ ಮುಖವನ್ನು ನೋಡುವ ಬದಲು ಬೇರೆತ್ತಲೋ ಮುಖ ಮಾಡಿದ.

'ಇಲ್ಲ, ಅಂತ ಅಗತ್ಯವಿದ್ದರೆ ಮಾತ್ರ ಇಲ್ಲಿಗೆ ಬರ್ತೀನಿ. ಇವತ್ತು ಸಾಕ್ಷ್ಯದ ಅನಿವಾರ್ಯತೆ ಇತ್ತಲ್ಲವೆ ಅದಕ್ಕೆ ಬಂದೆ'

ಅಧಿಕಾರಿ ಪಾಂಬುವಿನತ್ತ ನೋಡಿದ. ಪಾಂಬು ಅವನ ಮುಖವನ್ನು ನೋಡಲಾರದೆ ಬೇರೆತ್ತಲೋ ಮುಖ ಹೊರಳಿಸಿದ.

'ಅಂದ್ರೆ, ಯಾವುದಾದರೂ ಒಂದು ಸಾಕ್ಷ್ಯವನ್ನು ಒದಗಿಸುವ ಯೋಜನೆಯೆ?'

ಅಧಿಕಾರಿಯ ಪ್ರಶ್ನೆಗೆ ಅಧೀರನಾದ ಸುಳ್ಳುಗಾರ. ತನ್ನ ಬಣ್ಣ ಬದಲಾಯಿತೆನ್ನುವ ಭಯ ಅವನನ್ನು ಇನ್ನಷ್ಟು ತಬ್ಬಿತು. ಮಾತು ಮೂಡಿ ಬರದೆ ಮೌನವಾಗುಳಿದ. `ಮೌನಂ ಸಮ್ಮತಿ ಲಕ್ಷಣಂ' ಅನ್ನುವುದಕ್ಕೆ ಅವನೇ ಸಾಕ್ಷಿಯಾದ.

ಇನ್ಸ್‌ಪೆಕ್ಟರ್‌ನ ಕಣ್ಣುಗಳು ಕೆಂಡದುಂಡೆಗಳಾದಂತೆ ಆತಂಕಕ್ಕೀಡಾದ ಪಾಂಬು.

'ಸಾರ್, ದಯವಿಟ್ಟು ಕ್ಷಮಿಸಿ. ನಾನು ಇಲ್ಲಿಗೆ ಬಂದಿರೋದು ಸುಳ್ಳು ಸಾಕ್ಷಿ ಒದಗಿಸುವುದಕ್ಕಲ್ಲ. ನಿಜವಾದ ಸಾಕ್ಷಿಯನ್ನು ನಿಮ್ಮ ಮುಂದಿಡುವುದಕ್ಕೆ'

'ಸಂತೋಷ, ಆದ್ರೆ ನೀನು ಇಲ್ಲಿಗೆ ಬಂದಿರೋದು ನಿಜವಾದ ಸಾಕ್ಷಿಯನ್ನು ಹುಡುಕಿಕೊಂಡು ಅಲ್ಲ. ಸುಳ್ಳು ಸಾಕ್ಷಿಯನ್ನು ಪ್ರಸ್ತುತ ಪಡಿಸುವುದಕ್ಕೆ. ಅದಕ್ಕೆ ನೀನು ಮುತ್ತುಚಾಂಡಿಯ ಸಹಾಯವನ್ನು ಕೋರುವುದಕ್ಕೆ ಇಲ್ಲಿಗೆ ಬಂದಿರುವೆ'

ರಾಜಧಾನಿ ಮಾತು ಮುಗಿಸಿ ಅವನ ಪ್ರತಿಕ್ರಿಯೆಗೂ ಕಾಯದೆ ಜೀಪನ್ನೇರಿ ಹೊರಟ. ಪಾಂಬು ನಿಶ್ಚೇಷ್ಟಿತನಂತೆ ನಿಂತ!

* * *

ಹಿತೇಶನ ಹೆಜ್ಜೆಗಳು ಮರಳು ದಿಣ್ಣೆಯನ್ನು ಸವೆಸಿ ಭೋರ್ಗರೆವ ಕಡಲಿನ ಜಲರಾಶಿಯತ್ತ ನಡೆದವು. ಸೂರ್ಯ ಕಿರಣಗಳಿನ್ನೂ ಕೆಂಪೇರಲಿಲ್ಲ. ಆಗಲೇ ಕಡಲಿಗಿಳಿದ ದೋಣಿಗಳನ್ನು ಕುತೂಹಲದ ದೃಷ್ಟಿಯಿಂದ ನೋಡುತ್ತಿದ್ದ. ಮುಂಜಾನೆಯ ಇಳಿತದ ಅಲೆಗಳನ್ನು ಸಲೀಸಾಗಿ ದಾಟಿ ಮುಂದಕ್ಕೆ ಸಾಗುತ್ತಾ ಸಣ್ಣ ಚುಕ್ಕೆಯಂತೆ ಗೋಚರಿಸುವ ದೋಣಿಗಳೂ. ಬದುಕನ್ನು ಪಣಕ್ಕೊಡಿ ದೋಣಿಗಳ ಮೇಲೆ ಕಾರ್ಯನಿರ್ವಹಿಸುತ್ತ ತೆರಳುವ ಬೆಸ್ತರು. ಬದುಕಿನ ಏರುಪೇರಿನಂತೆ ಸಾಗುವ ಅಲೆಗಳ ಮೇಲೆ ಕೆಚ್ಚೆದೆಯಿಂದ ಸಾಗುವ ಬೆಸ್ತರ ಮೇಲೆ ಅತೀವ ಅಭಿಮಾನ ಹಿತೇಶನಿಗೆ. ಅಲೆಗಳ ನೀರು ಸಮೀಪಕ್ಕೆ ಬರುವಲ್ಲಿ ಕುಳಿತು ಕಣ್ಣೆದುರಿಗಿನ ದೃಶ್ಯವನ್ನು ನೋಡುತ್ತಿದ. ದೂರದಲ್ಲಿ ಶಿಳ್ಳೆಯ ದನಿ ಕೇಳಿತು. ಕುಳಿತಲ್ಲಿಂದಲೇ ಕತ್ತು ತಿರುಗಿಸಿದ. `ಬಂಡೆ'ಯ ಬಳಿಯಿಂದ ಮೀನುಗಾರಿಕೆಯ ದೋಣಿ ಸಮುದ್ರಕ್ಕಿಳಿಯುತ್ತಿತ್ತು. ಬೆಸ್ತರ `ಐಜೋರ' ಹಾಡು ತೇಲಿ ಬರುತ್ತಿತ್ತು. ಏಕಾಏಕಿ ಕಿವಿಗಡಚಿಕ್ಕುವ ವಿಚಿತ್ರ ಆಲಾಪದ ಸದ್ದು ಮೊರೆಯಿತು. ದಿಗ್ಗನೆ ಎದ್ದು ನಿತು ಸುತ್ತಲೂ ದೃಷ್ಟಿಸಿದ. ಭೋರ್ಗರೆತದ ಸದ್ದನ್ನು ಮೀರಿ ಬಂದ ಉನ್ಮಾದ ಲಹರಿ! ನಿರಾಶೆಯಿಂದ ಕೊರಳುಬ್ಬಿ ಬಂತು. ತನ್ನದು ಬರೀ ಭ್ರಮೆ!

ಭಾರವಾದ ಹೆಜ್ಜೆಗಳೊಂದಿಗೆ ದಿಣ್ಣೆಯ ಮೇಲೆ ನಡೆದ.

'ಅಪಾಯಕ್ಕೆ ಕೊರಳೊಡ್ಡುವುದನ್ನು ನೀನು ನಿಲ್ಸೋದಿಲ್ಲ' ಎಚ್ಚರಿಕೆಯ ಪದಗಳು ಹಿತೇಶನನ್ನು ನಿಲ್ಲಿಸಿದವು. ಪಾಂಬು ತಂಬಾಕು ತುಂಬಿದ ಬಾಯಿಯನ್ನು ಓರೆಯಾಗಿ ಹಿಡಿದು ಹೇಳಿದ.

'ಅಪಾಯ ಸುಳಿಯದ ಹಾಗೆ ಬೆಂಗಾವಲಿಗೆ ನೀನಿದ್ದೀಯಲ್ಲಾ?' ಮಾತು ವ್ಯಂಗ್ಯವಾಗಿರಲಿಲ್ಲ. ಹಿತೈಷಿಯಾದವನ ಮೇಲೆ ಅತೀಯಾದ ನಂಬಿಕೆ.

ಪಾಂಬು ಸಮೀಪಕ್ಕೆ ಬರುವವರೆಗೆ ನಿಂತೇ ಇದ್ದ.

'ಅದಕ್ಕೆಂತ ತಲೆನಾ ಬಡಿಗೆ ಬಡ್ಕೊಳ್ಳೋ ಧೈರ್ಯ ಮಾಡ್ತೀಯಾ?' ಪಾಂಬುವಿನ ಮಾತು ಒಗಟಿನಂತೆ ಕಂಡಿತು.

'ಅಂದ್ರೆ, ನೀನು ನನಗೆ ಸಹಾಯ ಮಾಡಲಾರೆ. ನನಗೆ ಚೆನ್ನಾಗಿ ಗೊತ್ತು. ಈ ಹಿಂದೆ ನನ್ನನ್ನು `ಬಂಡೆ'ಗೆ ಕರೆಸಿ ಪೊಲೀಸರಿಗೆ ನನ್ನ ಒಪ್ಪಿಸೋ ಯೋಜನೆ ಹಾಕ್ದಾಗಲೇ ಅಂದುಕೊಂಡೆ ಅದನ್ನು. ಪಾಂಬು, ನನ್ನ ಗುರಿ ನಾನು ಹೇಗಾದರೂ ತಲುಪ್ತೀನಿ. ನಿನ್ನ ಸಹಾಯವಿಲ್ಲದೆಯೂ ನಾನು ಅದನ್ನು ಸಾಧಿಸಬಲ್ಲೆ. ಇನ್ನು ನಿನಗೆ ನಾನು ಕಾಯೋನಲ್ಲ' ಧೈರ್ಯದ ಪದಗಳನ್ನು ಉಚ್ಚರಿಸಿ ಸಹಾಯ ಹಸ್ತ ನೀಡುವವನನ್ನು ತಬ್ಬಿಬ್ಬುಗೊಳಿಸಿದ.

## ಕಾವಲು

ಸಕ್ಕರೆ ಡಬ್ಬದ
ಮುಚ್ಚಳದ ಬಳಿ
ಇರುವೆಗಳ ಕಾವಲು!
ಕಾಫಿಗೆ ಬಿದ್ದು ಸಾಯಲು!

★ ದೇವಕಿಸುತ

